ಓ ಎಸ್ ನಂಃ 81/2016

ಪಿ ಡಬ್ಲುಃ 1

ಸಾಕ್ಷಿಯನ್ನು ದಿನಾಂಕ: 23-03-2019 ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

ಪಾಟೀ ಸವಾಲುಃ ಶ್ರೀ ಎಂ ಎಂ ಜೆ ವಕೀಲರಿಂದಃ

ನಾವು ಗ್ರಾಮ ಒಕ್ಕಲಿಗರು ಎಂದರೆ ಸರಿ . ನನ್ನ ತಂದೆ ತೀರಿಕೊಂಡು ಎಷ್ಟು ವರ್ಷ ಆಯಿತು ಎಂದು ಗೊತ್ತಿಲ್ಲ ಆ ಕಾಲಕ್ಕೆ ನಮ್ಮ ಜಾತಿಯಲ್ಲಿ ಬುದ್ಧಿವಂತರು ಯಾರು ಎಂದು ನನಗೆ ಗೊತ್ತಿಲ್ಲ . ನಮ್ಮ ಜಾತಿಯ ಕೋಲ್ಕಾರರು ಯಾರೆಂದು ನನಗೆ ಗೊತ್ತಿಲ್ಲ. ನಮ್ಮ ಜಾತಿಯಲ್ಲಿ ಕೋಲ್ಕಾರರು ಇಲ್ಲದೇ ಇದ್ದರೆ ಆ ಕಾಲದಲ್ಲಿ ಮದುವೆ ಆಗುವುದಿಲ್ಲ ಎಂದರೆ ಸರಿ . ಆ ಕಾಲದಲ್ಲಿ ಕೋಲ್ಕಾರರು ಇದ್ದು ದಾರೆ ಎರೆಯಬೇಕಿತ್ತು ಎಂದರೆ ಸರಿ . ಆಗ ಪುರೋಹಿತರು ನಮ್ಮ ಜಾತಿಯ ಮದುವೆಗೆ ಬರುತ್ತಿರಲಿಲ್ಲ. ಮದುವೆಯ ಕಾಲದಲ್ಲಿ ಯಾವ ಸಂಪ್ರದಾಯವನ್ನು ಆಚರಿಸಿದರು ಎಂದು ನನಗೆ ಗೊತ್ತಿಲ್ಲ. ಸಪ್ತಪದಿ ಎಂದರೆ ಏನು ಎಂದು ನನಗೆ ಗೊತ್ತಿಲ್ಲ . ದಾವೆಗೆ ಮಾಹಿತಿಯನ್ನು ನನ್ನ ಮಗಳು ವಕೀಲರಿಗೆ ಹೇಳಿದ್ದರು. ನನ್ನ ಮಗಳ ಮಾಹಿತಿಯ ಮೇರೆಗೆ ವಕೀಲರು ದಾವೆ ದಾಖಲಿಸಿದ್ದಾರೆ . ಮದುವೆಯ ಕಾಲದಲ್ಲಿ ನಮ್ಮ ಜಾತಿಯ ಸಂಪ್ರದಾಯ ಏನು ಇತ್ತು ಎಂದು ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಪಾಟೀ ಸವಾಲಿಗೆ ವಕೀಲರು ಸಮಯ ಕೇಳಿದ್ದು ಸಮಯ ನೀಡಲಾಯಿತು )

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೆ ಕೇ ಸರಿ ಇದೆ.

ಸಿವಿಲ್ ನ್ಯಾಯಾಲಯಧಿಶರು, ಹೊನ್ನಾವರ.